ಅಸಲು ದಾವಾ.ನಂ. 68/2018
ಡಿ ಡಬ್ಲ್ಯೂ-2

ದಿನಾಂಕಃ 12-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಎಂಜಿಕೆ ವಕೀಲರಿಂದ:

ಶೇಗುಣಸಿ ಗ್ರಾಮದ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ನನ್ನ ಅಜ್ಜನ 5 ಜನ ಹೆಣ್ಣು ಮಕ್ಕಳಿಗೆ ಪಾಲು ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜ ತನ್ನ ಜೀವಿತ ಕಾಲದಲ್ಲಿ ಪಾಲು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಹಳಿಂಗಳಿ ಗ್ರಾಮದ ಜಮೀನುಗಳಲ್ಲಿ ಸಹ ಹೆಣ್ಣು ಮಕ್ಕಳಿಗೆ ಪಾಲು ಕೊಟ್ಟಿಲ್ಲ ಎಂದರೆ ಸರಿ. ನನ್ನ ಅಜ್ಜನ ಜೀವಿತ ಕಾಲದಲ್ಲಿ ಅವರ 5 ಜನ ಹೆಣ್ಣು ಮಕ್ಕಳ ಮದುವೆ ಮಾಡಿರುತ್ತಾನೆ ಎಂದರೆ ಸರಿ. ಮದುವೆಯ ಕಾಲಕ್ಕೆ ನಿಯಮದ ಪ್ರಕಾರ ಕೊಡಬೇಕಾದ ವಸ್ತುಗಳನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಎಲ್ಲಾ ಹೆಣ್ಣು ಮಕ್ಕಳು ಆರ್ಥಿಕವಾಗಿ ಬಲಾಢ್ಯರಾಗಿರುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ಜಮೀನುಗಳು ನಮಗಿಂತ ಸುಮಾರು 10 ಪಟ್ಟು ಹೆಚ್ಚಿಗೆ ಇವೆ ಎಂದರೆ ಸರಿಯಲ್ಲ. ಆದ್ದರಿಂದ ಅವರು ಯಾವ ಕಾಲಕ್ಕೂ ಯಾವುದೇ ದಾವಾ ಆಸ್ತಿಗಳಲ್ಲಿ ಪಾಲು ಕೇಳಿಲ್ಲ ಎಂದರೆ ಸರಿಯಲ್ಲ.

ಹಳಿಂಗಳಿ ಗ್ರಾಮದ ಆಸ್ತಿಗಳಲ್ಲಿ 1, 2, 4 ನೇ ಪ್ರತಿವಾದಿಗಳು ಮತ್ತು ಭುಜಬಲಿ ಇವರಿಗೆ ಮಾತ್ರ ಪಾಲು ಇದೆ ಎಂದರೆ ಸರಿಯಲ್ಲ. ವಾದಿಯರಿಗೆ ಎಲ್ಲಾ ದಾವಾ ಆಸ್ತಿಗಳಲ್ಲಿ ಪಾಲು ಇದೆ ಎಂದರೆ ಸರಿಯಲ್ಲ. ಶೇಗುಣಸಿ ಗ್ರಾಮದ ಆಸ್ತಿಗಳಲ್ಲಿ ನಮ್ಮ ತಂದೆ ಪಾಯಪ್ಪ ಇವರ ಪಾಲಿಗೆ 4 ಎಕರೆ 19 ಗುಂಟೆ ಜಮೀನು ಬಂದಿರುತ್ತದೆ. 4 ಎಕರೆ ಜಮೀನು ಮಾರಾಟ ಮಾಡಿರುತ್ತೇವೆ, ಇನ್ನುಳಿದ ಜಮೀನು ನಮ್ಮ ಹೆಸರಿನಲ್ಲಿ ಇರುತ್ತದೆ. ಸದರಿ 4 ಎಕರೆ ಜಮೀನನ್ನು ದಿನಾಂಕಃ 17-05-2017 ರಂದು ಅಶೋಕ ಅವ್ವಕನವರ ಎಂಬುವವರಿಗೆ ಮಾರಾಟ ಮಾಡಿರುತ್ತೇವೆ. 4 ನೇ ಪ್ರತಿವಾದಿ ತನ್ನ ಪಾಲಿನ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. 3, 6 ಮತ್ತು 7 ನೇ ಪ್ರತಿವಾದಿಯರು ಕೂಡಿಕೊಂಡು ಸದರಿ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿ ಮಾತ್ರ ಆಸ್ತಿ ಉಳಿಸಿಕೊಂಡಿರುತ್ತಾನೆ ಎಂದರೆ ಸರಿ. ಆಸ್ತಿಯನ್ನು ಮಾರಾಟ ಮಾಡುವಾಗ ವಾದಿಯರ ಒಪ್ಪಿಗೆ ಪಡೆದಿಲ್ಲ ಎಂದರೆ ಸರಿ. ಹಳಿಂಗಳಿ ಗ್ರಾಮದ ಎಲ್ಲಾ ಆಸ್ತಿಗಳು ಭುಜಬಲಿ ಇವರ ಪಾಲಿಗೆ ಬಂದಿದ್ದು, ಅವರ ಮರಣಾನಂತರ ವಾದಿಯರು ಅದರ ವಾರಸುದಾರರಾಗಿದ್ದು, ಕಬ್ಜಾ

ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಹಳಿಂಗಳಿ ಗ್ರಾಮದ ಆಸ್ತಿಗಳಲ್ಲಿ ಬೆಳೆದ ಕಬ್ಬನ್ನು ವಾದಿಯರು ಕಾರ್ಖಾನೆಗೆ ಕಳುಹಿಸುತ್ತಾರೆ ಎಂದರೆ ಸರಿ. ಹಳಿಂಗಳಿ ಆಸ್ತಿಗಳಲ್ಲಿ ನಾವು ಸ್ವಾಧೀನತೆ ಹೊಂದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಆಸ್ತಿಗಳಲ್ಲಿ ಪಾಲು ಕೊಡಬಾರದೆಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.08.12 17:53:39 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ.ಗಳು, ಬನಹಟ್ಟಿ